# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಸದಸ್ಯರ ಹೆಸರು | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 183 (241) |
| ಉತ್ತರಿಸಬೇಕಾದ ದಿನಾಂಕ | 10.12.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಧುಗಿರಿ ಪಟ್ಟಣದ ಯು.ಜಿ.ಡಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಬಳಕೆಯಾಗಿರುವ ಮೊತ್ತ ಹಾಗೂ ಬಾಕಿ ಇರುವ ಮೊತ್ತ ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>ಮಧುಗಿರಿ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯ ರೂ.48.95 ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ 31.05.2017ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಯ ಪ್ಯಾಕೇಜ್-1ರ ರೂ. 35.76 ಕೋಟಿಗಳ ಕಾಮಗಾರಿಯನ್ನು ಮೆ||ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ರವರಿಗೆ ದಿನಾಂಕ 10.07.2019ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಗಳ ಪ್ರಗತಿಯು ಕೆಳಕಂಡಂತಿದೆ:-<br><br>
<table>
<tr><th>ಕ್ರ. ಸಂ</th><th>ವಿವರ</th><th>ಗುತ್ತಿಗೆ ಕರಾರಿನಂತೆ</th><th>ಪ್ರಗತಿ</th></tr>
<tr><td>1</td><td>ಆಂತರಿಕ ಕೊಳವೆ ಮಾರ್ಗ ಅಳವಡಿಸುವುದು</td><td>64.39 ಕಿ.ಮೀ.</td><td>62.77 ಕಿ.ಮೀ. ಪೂರ್ಣಗೊಂಡಿದೆ.</td></tr>
<tr><td>2</td><td>ಯಂತ್ರ ಗುಂಡಿಗಳ ನಿರ್ಮಾಣ</td><td>2290</td><td>2368ಪೂರ್ಣಗೊಂಡಿದೆ.</td></tr>
<tr><td>3</td><td>ಗೃಹ ಸಂಪರ್ಕ ಕಲ್ಪಿಸುವುದು.</td><td>5700</td><td>5368 ಪೂರ್ಣಗೊಂಡಿದೆ.</td></tr>
<tr><td>4 (ಅ)</td><td>4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ ಎಂ.ಬಿ.ಬಿ.ಆರ್ ತಾಂತ್ರಿಕತೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ.</td><td colspan="2">4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>ಯಂತ್ರೋಪಕರಣಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.</td></tr>
</table>
</td></tr>
</table>

| | | |
|---|---|---|
| 4 (ಆ) | 0.60 ಎಂ.ಎಲ್.ಡಿ. ಸಾಮರ್ಥ್ಯದ ಎನ್.ಇ.ಬಿ.ಆರ್ ತಾಂತ್ರಿಕತೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ. | ಕಾಮಗಾರಿಯು ಪೂರ್ಣಗೊಂಡಿದ್ದು ಅಕ್ಟೋಬರ್ 2024ರಂದು ಚಾಲನೆಗೊಳಿಸಲಾಗಿದೆ |
| 5 | ವೆಟ್ ವೆಲ್ - 1 | ವೆಟ್‌ವೆಲ್ ನಿರ್ಮಾಣಕ್ಕೆ ಮೊದಲು ನೀಡಿದ ಸ್ಥಳಕ್ಕೆ ಸ್ಥಳೀಯ ರೈತರು ನ್ಯಾಯಾಲಯದಲ್ಲಿ ದಾವೆ ಹೂಡಿದ ಕಾರಣ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ರವರು ಪರ್ಯಾಯ ಸ್ಥಳವನ್ನು ದಿನಾಂಕ 07.03.2023 ರಲ್ಲಿ ಮಂಡಳಿಗೆ ಹಸ್ತಾಂತರಿಸಿರುತ್ತಾರೆ. ಅಲ್ಲದೆ ಹಸ್ತಾಂತರಿಸಿದ ಸ್ಥಳವು ಗಟ್ಟಿ ಬಂಡೆಯಿಂದ ಕೂಡಿದ ಕಾರಣ ಕಾಮಗಾರಿಯನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

**ಪ್ಯಾಕೇಜ್-2**: 40 ಹೆಚ್.ಪಿ ಸಾಮರ್ಥ್ಯದ ಪಂಪಿಂಗ್ ಮೆಷನರಿ ಹಾಗೂ ಸಂಬಂಧಿಸಿದ ಉಪಕರಣಗಳನ್ನು ಸರಬರಾಜು ಮಾಡುವ ಕಾಮಗಾರಿಯನ್ನು ಮೆ||ಎಂ.ಪಿ. ಎಲೆಕ್ಟ್ರೋ ಸರ್ವೀಸಸ್, ಬೆಂಗಳೂರು ರವರಿಗೆ ವಹಿಸಲಾಗಿದ್ದು ಕಾಮಗಾರಿಯನ್ನು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿರುತ್ತದೆ.

**ಪ್ಯಾಕೇಜ್-3:** 11 ಕೆವಿಫೀಡರ್ ಲೈನ್‌ಒದಗಿಸುವ ಕಾಮಗಾರಿಯನ್ನು ಮೆ||ಭಾಗ್ಯ ಎಲೆಕ್ಟ್ರಿಕಲ್ಸ್, ಮಧುಗಿರಿ ರವರಿಗೆ ವಹಿಸಿದ್ದು, ವೆಟ್‌ವೆಲ್ ಹಾಗೂತ್ಯಾಜ್ಯ ನೀರಿನ ಸಂಸ್ಕರಣಾ ಘಟಕಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, 0.6 ಎಂ.ಎಲ್.ಡಿ ಸಂಸ್ಕರಣಾ ಘಟಕವನ್ನು ಅಕ್ಟೋಬರ್-2024 ರಲ್ಲಿ ಚಾಲನೆಗೊಳಿಸಲಾಗಿದೆ.

**ಪ್ಯಾಕೇಜ್-4**: Sucking cum Jetting ಮೆಷಿನರಿಯನ್ನು ಸರಬರಾಜು ಮಾಡಲು ಮೆ|| ಕ್ವಾಲಿಟಿ ಎನ್ವಿರೊ ಇಂಜಿನಿಯರ್ ಪ್ರೈ.ಲಿ. ರವರಿಗೆ ಕಾರ್ಯಾದೇಶ ನೀಡಿದ್ದು, ಮೆಷಿನರಿಗಳನ್ನು ಸರಬರಾಜು ಮಾಡಿರುತ್ತಾರೆ.

ಸದರಿ ಯೋಜನೆಗೆ ನವೆಂಬರ್-2024 ರ ಅಂತ್ಯಕ್ಕೆ ರೂ.35.95 ಕೋಟಿಗಳು ವೆಚ್ಚವಾಗಿರುತ್ತದೆ. ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

| | | |
|---|---|---|
| **ಆ)** | ಮಧುಗಿರಿ ಪಟ್ಟಣದ ಯು.ಜಿ.ಡಿ. ಕಾಮಗಾರಿಯ ವಿಳಂಬ ಧೋರಣೆಯಂದಾಗಿ ಹಾಗೂ ಅವೈಜ್ಞಾನಿಕ ಕಳಪೆಯಿಂದ ಕೂಡಿದ್ದು ಸರ್ಕಾರವು ಗುತ್ತಿಗೆದಾರರ ಮೇಲೆ ತೆಗದುಕೊಂಡ ಕ್ರಮವೇನು? | ಒಳಚರಂಡಿ ಕಾಮಗಾರಿಯನ್ನು ವೈಜ್ಞಾನಿಕವಾಗಿ ಕೈಗೊಳ್ಳಲಾಗಿದ್ದು, ಎಲ್ಲಾ ಸಾಮಗ್ರಿಗಳ ಹಾಗೂ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆಯನ್ನು 3ನೇ ವ್ಯಕ್ತಿಯಿಂದ ಪರಿವೀಕ್ಷಣೆ ಮಾಡಲಾಗಿರುತ್ತದೆ. ವೆಟ್‌ವೆಲ್ ಜಾಗವನ್ನು ವಿಳಂಬವಾಗಿ ಹಸ್ತಾಂತರಿಸಿರುವುದರಿಂದ, ಕೊಳವೆ ಮಾರ್ಗ ಅಳವಡಿಸಲು ಅಡೆತಡೆಗಳಿರುವುದರಿಂದ ಹಾಗೂ ಗುತ್ತಿಗೆದಾರರಿಂದ ಕಾಮಗಾರಿ ವಿಳಂಬವಾಗಿರುತ್ತದೆ. ಸದರಿ ಕಾಮಗಾರಿಯು ವಿಳಂಬವಾಗಿರುವುದಕ್ಕೆ ಪ್ಯಾಕೇಜ್ 1ರ ಗುತ್ತಿಗೆದಾರರಿಗೆ ಒಟ್ಟು ರೂ.16.15 ಲಕ್ಷಗಳ ದಂಡವನ್ನು ವಿಧಿಸಲಾಗಿರುತ್ತದೆ. ಅಗಸರ ಹೊಳೆ ಬಳಿ ಕೊಳವೆ ಅಳವಡಿಸಲು ವೇರಿಯೇಷನ್ ಪ್ರಸ್ತಾವನೆಯು ಮಂಡಳಿಯಲ್ಲಿ ಪರಿಶೀಲನೆಯಲ್ಲಿದ್ದು, ಸದರಿ ಕಾಮಗಾರಿಗೆ ಈ ಕೆಳಗಿನಂತೆ ಅಡೆತಡೆಗಳಿರುತ್ತವೆ.<br><br>1. ವೆಟ್‌ವೆಲ್ ನಿಂದ ತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಅಳವಡಿಸಬೇಕಾಗಿರುವ 400 ಮಿ.ಮೀ. ವ್ಯಾಸದ 300 ಮೀ. ಉದ್ದದ ಬಾಕಿ DI ಕೊಳವೆ ಮಾರ್ಗ ಅಳವಡಿಸಲು ಸ್ಥಳೀಯ ಮಾಲೀಕರಿಂದ ತಕರಾರು ಇರುತ್ತದೆ.<br><br>2. ಪಟ್ಟಣದ ಅಯ್ಯಪ್ಪ ದೇವಸ್ಥಾನದ ಬಳಿ 500 ಮಿ.ಮೀ ವ್ಯಾಸದ 300ಮೀ. ಉದ್ದದ RCC ಕೊಳವೆ ಮಾರ್ಗ ಅಳವಡಿಸಲು ತಕರಾರು ಇರುತ್ತದೆ. ಸದರಿ ಸ್ಥಳಗಳಲ್ಲಿ ಕೊಳವೆ ಮಾರ್ಗ ಅಳವಡಿಸಲು ಇರುವ ತಕರಾರನ್ನು ಸ್ಥಳೀಯ ಸಂಸ್ಥೆ ವತಿಯಿಂದ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.<br><br>ಮೇಲಿನ ಅಡೆತಡೆಗಳು ನಿವಾರಣೆಯಾದಲ್ಲಿ ಬಾಕಿ ಕಾಮಗಾರಿಗಳನ್ನು ಮಾರ್ಚ್-2025ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. |

ಸಂಖ್ಯೆ : ನಅಇ 75 ಯುಎಂಎಸ್ 2024

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು